**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನೈದನೇ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-43)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಡಿ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94ಸಿಸಿ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"94ಡಿ. ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾದ, ಅದರ ಮತ್ತು ಅದಕ್ಕೆ ನಿಕಟದಲ್ಲಿ ತಾಗಿಕೊಂಡಿರುವ ನಿವೇಶನ ಸಹಿತವಾಗಿ ವಾಸದ ಮನೆಯ ಭೂಮಿಯನ್ನು ಸಕ್ರಮಗೊಳಿಸುವುದು ಮತ್ತು ಮಂಜೂರು ಮಾಡುವುದು.-** ಈ ಪ್ರಕರಣದಲ್ಲಿ ಇನ್ನುಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ನಿಯಮಿಸಲಾದ ಪ್ರಾಧಿಕಾರವು, ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅಸ್ತಿತ್ವದಲ್ಲಿರುವ ಅಥವಾ ವಿಲೀನಗೊಳಿಸಬೇಕಾದ ಅಥವಾ ಗ್ರಾಮವಾಗಿ ಪರಿವರ್ತನೆಗೊಂಡ ಗ್ರಾಮದ ಗಡಿಯೊಳಗೆ ಬರುವ, ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು ಸರ್ಕಾರಕ್ಕೆ ಸೇರಿದ ದಾಖಲಾಗದ ವಾಸಿಸುವ

ಸ್ಥಳಗಳಲ್ಲಿರುವ ಯಾವುದೇ ಭೂಮಿಯಲ್ಲಿ, ಯಾವೊಬ್ಬ ವ್ಯಕ್ತಿಯು, ವಾಸದ ಮನೆ ಅದರ ನಿವೇಶನ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಭೂಮಿ, ಯಾವುದಾದರೂ ಇದ್ದಲ್ಲಿ, ಅದರ ಸಹಿತವಾಗಿ ಅನಧಿಕೃತ ಅಧಿಭೋಗವನ್ನು ಹೊಂದಿದ್ದಾನೆಂದು ಹಾಗೂ ಅದನ್ನು ಅನುಭವಿಸುವುದಕ್ಕೆ ಅದು ಅವಶ್ಯವೆಂದು ಮನವರಿಕೆಯಾದರೆ, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ನಮೂನೆಯಲ್ಲಿ, ಅಂಥ ಶುಲ್ಕದ ಜೊತೆಗೆ ಮತ್ತು ಅಂಥ ಮೊತ್ತದ ಸಂದಾಯದ ಮೇಲೆ ಅಂಥ ವ್ಯಕ್ತಿಯು ಅದಕ್ಕೆ ಅರ್ಜಿ ಸಲ್ಲಿಸಿದ ಮೇಲೆ, ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದ ಹಾಗೂ ಮಂಜೂರಾತಿ ಆದೇಶದ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಂಥ ರೀತಿಯಲ್ಲಿ ಸಕ್ರಮಗೊಳಿಸಬಹುದು ಮತ್ತು ಮಂಜೂರು ಮಾಡಬಹುದು, ಎಂದರೆ:–

(i) ಈ ಪ್ರಕರಣದ ಅಡಿಯಲ್ಲಿ ಸಕ್ರಮಗೊಳಿಸುವಿಕೆ ಮತ್ತು ಮಂಜೂರಾತಿಗೆ ಸಂಬಂಧಿಸಿದ ಅರ್ಜಿಯನ್ನು, ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದಲ್ಲಿದ್ದಂತೆ, ಕೃಷಿ ಮತ್ತು ತತ್ಸಂಬಂಧಿತ ಉದ್ದೇಶಗಳಿಗಾಗಿ ಇರಿಸಿದ, ಅರ್ಜಿದಾರನು ನಿರ್ಮಿಸಿದ ಮತ್ತು ಅಧಿಭೋಗ ಹೊಂದಿದ ಅನಧಿಕೃತ ವಾಸದ ಮನೆಯನ್ನು ಮತ್ತು ಅದಕ್ಕೆ ಲಗತ್ತಾದ ನಿವೇಶನವನ್ನು, ಆತನು ಅದರ ವಿಸ್ತೀರ್ಣ ಮತ್ತು ಚಕ್ಕುಬಂದಿಗಳೊಂದಿಗೆ ರುಜುವಾತಿನ ಸಹಿತ ಸಲ್ಲಿಸತಕ್ಕದ್ದು;

(ii) ಅರ್ಜಿಯನ್ನು ಯಾವ ಭೂಮಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆಯೋ, ಆ ಭೂಮಿಯು ಇರುವ ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲಿ, ಸಕ್ರಮಗೊಳಿಸುವುದಕ್ಕೆ ಮತ್ತು ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನು, ಯಾವುದೇ ಕಟ್ಟಡ ಅಥವಾ ನಿವೇಶನವನ್ನು ಹೊಂದಿದ್ದರೆ, ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ ;

(iii) ಯಾವೊಬ್ಬ ವ್ಯಕ್ತಿಯು, ಆತನ ಹೆಸರಿನಲ್ಲಾಗಲಿ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಾಗಲಿ, ಒಂದಕ್ಕಿಂತ ಹೆಚ್ಚು ವಾಸದ ಮನೆ ಮತ್ತು ಅದಕ್ಕೆ ಲಗತ್ತಾದ ನಿವೇಶನವನ್ನು ಸಕ್ರಮಗೊಳಿಸುವುದಕ್ಕೆ ಮತ್ತು ಅದರ ಮಂಜೂರಾತಿಗೆ ಅರ್ಹನಾಗಿರತಕ್ಕದ್ದಲ್ಲ;

**ವಿವರಣೆ:** ಈ ಖಂಡದ ಉದ್ದೇಶಕ್ಕಾಗಿ, "ಕುಟುಂಬದ ಸದಸ್ಯ" ಎಂದರೆ ಮತ್ತು ಇದು, ಪತಿ, ಪತ್ನಿ, ಮದುವೆಯಾಗದ ಹೆಣ್ಣು ಮಕ್ಕಳು ಮತ್ತು ಸಂದರ್ಭಾನುಸಾರವಾಗಿ ಅಪ್ರಾಪ್ತ ಗಂಡು ಮಕ್ಕಳು ಇವರನ್ನು ಒಳಗೊಳ್ಳುತ್ತದೆ;

(iv) ಹಾಗೆ ಮಂಜೂರಾದ ಭೂಮಿಯನ್ನು, ಮಂಜೂರಾತಿ ಪ್ರಮಾಣಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯವರೆಗೆ ಪರಭಾರೆ ಮಾಡಕತಕ್ಕದ್ದಲ್ಲ;

(v) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಸಕ್ರಮ ಮತ್ತು ಮಂಜೂರಾತಿಯು, ವಾಸ್ತವವಾಗಿ ಅನಧಿಕೃತ ವಾಸದ ಮನೆ ಮತ್ತು ಅದಕ್ಕೆ ಲಗತ್ತಾದ ನಿವೇಶನಕ್ಕಿಂತ ಹೆಚ್ಚಾಗಿಲ್ಲದಂತೆ ಮತ್ತು ಅಂಥ ವ್ಯಕ್ತಿಯು ಅದನ್ನು ಅನುಭವಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯಕವಾಗಿದ್ದರೆ, ಆದರೆ ಒಟ್ಟಾರೆಯಾಗಿ 4000 ಚದರ ಅಡಿಗೆ ಹೆಚ್ಚಾಗದಂತೆ, ಯಾವುದು ಕಡಿಮೆಯೋ ಅಷ್ಟಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ; ಮತ್ತು

(vi) ವಾಸದ ಮನೆಯ ನಿರ್ಮಾಣ ಮತ್ತು ಅದಕ್ಕೆ ಲಗತ್ತಾದ ಭೂಮಿಯು,–

(ಎ) ನೈಸರ್ಗಿಕ ಜಲ ಹರಿವಿನ ಸಾಲಿನಲ್ಲಿ ಅಥವಾ ಕಣಿವೆ ಮಾರ್ಗದಲ್ಲಿದ್ದರೆ;

(ಬಿ) ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿಸಲಾದ ರಸ್ತೆಗಳು, ಒಳ ಅಥವಾ ಹೊರ ವರ್ತುಲ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು, ವಿಸ್ತರಿಸುವುದಕ್ಕೆ ಉದ್ದೇಶಿಸಿದಂಥವುಗಳನ್ನು ಒಳಗೊಂಡಂತೆ ವರ್ತುಲ ರಸ್ತೆಗಳ ಉಪ ರಸ್ತೆ (ಬೈ–ಪಾಸ್)ಗಳು ಮತ್ತು ರೈಲು ಮಾರ್ಗಗಳು, ಟ್ರಾಮ್ ಮಾರ್ಗಗಳು, ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ಪರಿಯೋಜನೆಗಳು, ಸಂಪರ್ಕ ಮತ್ತು ಇತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಉಪಯುಕ್ತತೆಗಳ ಮಾರ್ಗದಲ್ಲಿದ್ದಲ್ಲಿದ್ದರೆ;

(ಸಿ) ಅರಣ್ಯ ಭೂಮಿಯಾಗಿದ್ದರೆ;

(ಡಿ) ಮೀಸಲು ಉದ್ಯಾನಗಳು, ಆಟದ ಮೈದಾನಗಳು, ಬಹಿರಂಗ ಸ್ಥಳಗಳು ಅಥವಾ ಯಾವುವೇ ನಾಗರಿಗೆ ಸೌಲಭ್ಯಗಳಿಗೆ ಒದಗಿಸಿದಂಥ ಸ್ಥಳವಾಗಿದ್ದರೆ;

(ಇ) ನೆರೆಹೊರೆಯವರ ಸ್ವತ್ತಿನೊಳಗೆ, ಮಳೆ ನೀರು ಹರಿವುಗಳ ಮೇಲೆ, ಕೆರೆ ತಳ ಪ್ರದೇಶಗಳಲ್ಲಿ, ನದಿ ಪಾತ್ರ ಅಥವಾ ತಳಗಳಲ್ಲಿ ಮತ್ತು ಕಾಲುವೆಗಳಲ್ಲಿ ಚಾಚಿಕೊಂಡಿದ್ದರೆ ಅಥವಾ ಹೈ ಟೆನ್ಷನ್ ವಿದ್ಯುತ್ ಮಾರ್ಗಗಳ ಕೆಳಗಿನ ಸ್ಥಳವಾಗಿದ್ದರೆ;

(ಎಫ್) ಪಾರಂಪರಿಕ ಸ್ಮಾರಕಗಳು, ವಿಮಾನ ನಿಲ್ದಾಣಗಳು ಮತ್ತು ರಕ್ಷಣಾ ಇಲಾಖೆಯ ನಿಯಂತ್ರಣಗಳಿಗಾಗಿ ವಲಯ ರಚನೆ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಎತ್ತರದ ನಿರ್ಬಂಧಗಳ ವಿರುದ್ಧ ಬಳಸಲಾದ ಸ್ಥಳವಾಗಿದ್ದರೆ;

(ಜಿ) ಹೈ ಟೆನ್ಷನ್ ಮಾರ್ಗಗಳು ಅಥವಾ ಅಗ್ನಿ ಸಂರಕ್ಷಣಾ ಕ್ರಮಗಳಿಂದ ಯಾವುದೇ ಅನುಮತಿಗೆ ಅನುಗುಣವಾಗಿರದ ಸ್ಥಳವಾಗಿದ್ದರೆ; ಮತ್ತು

(ಹೆಚ್) ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ನಿಯಂತ್ರಣವು ಒಳಗೊಂಡಿರುವ ಪ್ರದೇಶವಾಗಿದ್ದರೆ

– ಅದನ್ನು ಸಕ್ರಮಗೊಳಿಸತಕ್ಕದ್ದಲ್ಲ ಮತ್ತು ಮಂಜೂರು ಮಾಡತಕ್ಕದ್ದಲ್ಲ.

**ವಿವರಣೆ.**– ಈ ಪ್ರಕರಣದ ಉದ್ದೇಶಕ್ಕಾಗಿ, "ದಾಖಲಾಗದ ವಾಸಿಸುವ ಸ್ಥಳ" ಎಂದರೆ, ಅಸ್ತಿತ್ವದಲ್ಲಿರುವ ಗ್ರಾಮ ಅಥವಾ ವಿಲೀನಗೊಳಿಸಬೇಕಾದ ಅಥವಾ ಗ್ರಾಮವಾಗಿ ಪರಿವರ್ತಿಸಿದ ಗ್ರಾಮದ ಗಡಿಯೊಳಗೆ ಬರುವ, ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯಲ್ಲಿರುವ ಮತ್ತು ಸರ್ಕಾರವು ಹಾಗೆಂದು ಗುರುತಿಸಿದ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲನಿ, ಅಥವಾ ವಾಸಿಸುವ ಸ್ಥಳಗಳ ಯಾವುದೇ ಅಂಥ ಗುಂಪು.

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರ ಹಟ್ಟಿ, ನಾಯಕರಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿಯಂಥ ದಾಖಲಾಗದ ವಾಸಿಸುವ ಸ್ಥಳಗಳಲ್ಲಿ ಬರುವ, ಸರ್ಕಾರಕ್ಕೆ ಸೇರಿದ ಭೂಮಿಯಲ್ಲಿರುವ ಅನಧಿಕೃತವಾಗಿ ನಿರ್ಮಿಸಿದ ವಾಸದ ಮನೆ ಮತ್ತು ಅದಕ್ಕೆ ತಾಗಿಕೊಂಡಿರುವ ಭೂಮಿಯನ್ನು ಅಥವಾ ಪ್ರಸ್ತುತ ಇರುವ ಕಂದಾಯ ಗ್ರಾಮದೊಳಗೆ ಬರುವ ಅಥವಾ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ವಿಲೀನಗೊಳಿಸಬೇಕಾದ ಅಥವಾ ಗ್ರಾಮವನ್ನಾಗಿ ಪರಿವರ್ತಿಸಬೇಕಾದ, ರಾಜ್ಯ ಸರ್ಕಾರವು ಹಾಗೆಂದು ಗುರುತಿಸಿರುವಂಥ ಮನೆಗಳ ಯಾವುದೇ ಇತರ ಗುಂಪನ್ನು ಸಕ್ರಮಗೊಳಿಸುವುದಕ್ಕೆ ಅನುಕೂಲ ಕಲ್ಪಿಸಿಕೊಡಲು, ಪ್ರಕರಣ 94-ಡಿ ಯನ್ನು ಸೇರಿಸುವ ಮೂಲಕ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ

ಸಕ್ರಮಗೊಳಿಸಲು ಮತ್ತು ಮಂಜೂರು ಮಾಡಲು ಪ್ರಸ್ತಾವಿಸಲಾದ ಭೂಮಿಯು ಸರ್ಕಾರಕ್ಕೆ ಸೇರಿದೆ ಮತ್ತು ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇವೆ. ಈ ಭೂಮಿಗಳ ಮಾರ್ಗಸೂಚಿ ಮೌಲ್ಯವು ಅತ್ಯಂತ ಕಡಿಮೆಯಾಗಿದೆ. ಆದಾಗ್ಯೂ, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರಲ್ಲಿ ನಿಯಮಿಸಲಾಗುವ ಶುಲ್ಕವನ್ನು ಸಂಗ್ರಹಿಸಲು ಪ್ರಸ್ತಾವಿಸಲಾಗಿದೆ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 2** | ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 94ಡಿ ಪ್ರಕರಣವು,-<br>(ಎ) ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು ಸರ್ಕಾರಕ್ಕೆ ಸೇರಿದ ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಯಾವುದೇ ಭೂಮಿಯಲ್ಲಿ, ವಾಸದ ಮನೆಗಳ ಭೂಮಿಯ ಮಂಜೂರಾತಿ ಮತ್ತು ಸಕ್ರಮಗೊಳಿಸುವುದಕ್ಕಾಗಿ ಒಬ್ಬ ವ್ಯಕ್ತಿಯು ಯಾವ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಬೇಕು, ಅರ್ಜಿಯ ನಮೂನೆ ಮತ್ತು ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಶುಲ್ಕದ ಕುರಿತು ನಿಯಮಗಳನ್ನು ರಚಿಸಲು; ಮತ್ತು<br>(ಬಿ) ಅಂಥ ವಾಸದ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ ಮತ್ತು ಮಂಜೂರಾತಿಗಾಗಿ ಷರತ್ತುಗಳು ಮತ್ತು ನಿರ್ಬಂಧಗಳ ಕುರಿತು ನಿಯಮಗಳನ್ನು ರಚಿಸಲು,<br>-ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣಸೌಧ ಘಟಕ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 1000, 16ನೇ ನವೆಂಬರ್ 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**FIFTEENTH SESSION**

# THE KARNATAKA LAND REVENUE (THIRD AMENDMENT) BILL, 2017

**(L.A. Bill No. 43 of 2017)**

A Bill further to amend the Karnataka Land Revenue Act, 1964.

Whereas, it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty eighth year of the Republic of India, as follows:-

**1. Short title and commencement.**- (1) This Act may be called the Karnataka Land Revenue (Third Amendment) Act, 2017.

(2) It shall come into force at once.

**2. Insertion of new section 94-D.**- In the Karnataka Land Revenue Act, 1964 (Karnataka Act 12 of 1964) after section 94CC, the following shall be inserted, namely:-

**"94-D. Regularization and grant of land of dwelling house along with site thereof and land immediately appurtenant thereto built on Government land in unrecorded habitations.**- Notwithstanding anything contained in this Act except as hereinafter provided in this section, the prescribed authority, if satisfied after holding such enquiry as it deems fit that any person is in unauthorized occupation of dwelling house along with the site thereof and land immediately appurtenant thereto and necessary for its

enjoyment if any, in any land belonging to the Government in the unrecorded habitations prior to the date of commencement of the Karnataka Land Revenue (Third Amendment) Act, 2017, which are falling within the boundaries of a existing village or to be amalgamated or converted into a village, may on an application made to it by such person within such period, in such form, along with such fee and on payment of such amount, as may be prescribed, regularize and grant in such manner subject to the following conditions and such other restrictions and conditions as may be prescribed and specified in the order of grant certificate, namely:-

(i) the application for regularization and grant under this section shall be made by the applicant along with proof with extent and boundaries that he has constructed and occupied the unauthorized dwelling house and site appurtenant thereto kept for agriculture and allied purposes as on commencement of the Karnataka Land Revenue (Third Amendment) Act, 2017;

(ii) no land shall be granted if the person who has applied for regularization and grant of such land or any member of his family owns any building or site within rural or urban areas in which the land for which application is made is situated;

(iii) no person shall be eligible for regularization and grant of land for more than one dwelling house and the site appurtenant thereto either in his name or in the name of any member of his family;

**Explanation:** For the purpose of this clause "Member of Family" means and includes the husband, wife, unmarried daughters and minor sons as the case may be.

(iv) the land so granted shall not be alienated for a period of fifteen years from the date of receiving grant certificate;

(v) the regularisation made and granted under this section shall not be more than the area actually occupied by the unauthorised dwelling house and the site appurtenant thereto and necessary for its enjoyment if any, in all by such person but not exceeding 4000 square feet whichever is less; and

(vi) no land shall be regularized and granted where construction of dwelling house and the land appurtenant thereto,-

(a) lies in the line of natural drains or course of valley;

(b) coming in the way of existing or proposed roads, inner or outer ring roads, national highways, by pass over ring roads including those proposed for widening and railway lines, tramways, mass rapid transit system projects, communications and other civic facilities or public utilities;

(c) a forest land;

(d) reserved for parks, playgrounds, open places or for providing any civic amenities;

(e) is abutting to neighbouring property, storm water drain, tank bed areas, river course or beds and canals or below the high tension electric lines;

(f) use against height restrictions specified in zoning regulations for heritage monuments, aerodromes and defence regulations;

(g) not conforms to any clearance from high-tension lines or fire protection measures; and

(h) in the area covered by the Coastal Zone Regulation of the Ministry of Environment and Forest, Government of India.

**Explanation:-** For the purpose of this section "Unrecorded habitation" means Lambani Tanda, Gollarahatti, Vaddarahatti, Kurubarahatti, Nayakarahatti, Majare Grama, Hadi, Doddi, Palya, Camp, Colony or any such group of habitations in any Land belonging to Government and identified as such by the Government which are falling within the boundaries of existing village or to be amalgamated or converted in to a village.

## STATEMENT OF OBJECTS AND REASONS

It is considered necessary to amend the Karnataka Land Revenue Act, 1964 by inserting section 94D to facilitate the regularization of unauthorised construction of a dwelling house alongwith the land appurtenant thereto in a land belonging to the Government in unrecorded habitations like Lambani Tanda, Gollarahatti, Vaddarahatti, Kurubarahatti, Nayakarahatti, Majare Grama, Hadi, Doddi, Palya, Camp, Colony or any other group of houses identified as such by the State Government falling within a existing revenue village or to be amalgamated or converted into a village subject to such conditions as may be prescribed.

Hence the Bill.

## FINANCIAL MEMORANDUM

The lands proposed to be regularized and granted belongs to the Government and are situated mainly in rural areas. The guidance value of these lands is very minimal. However, it is proposed to collect fee which will be prescribed in the Karnataka Land Revenue Rules, 1966.

**MEMORANDUM REGARDING DELEGATED LEGISLATION**

| | |
|---|---|
| Clause 2 | Section 94D sought to be inserted under this clause empowers the State Government,-<br>(a) to make rules regarding prescribe the period, fee and form of application for regularisation and grant of land of dwelling houses which are falling in any land belonging to the Government in the unrecorded habitation prior to the date of commencement of the Karnataka Land Revenue (Fourth Amendment) Act, 2017; and<br>(b) to make rules regarding prescribe the conditions and restrictions for the manner of regularisation and grant of such dwelling houses. |

The proposed delegation of Legislative power is normal in character.

**KAGODU THIMMAPPA**
Minister for Revenue

**S. Murthy**
Secretary (I/c)
Karnataka Legislative Assembly

Suvarna Soudha Unit, Belgaum, 16th November, 2017 P7, W.D., Copies 1000